# ಕರ್ನಾಟಕ ಸರ್ಕಾರ

ಸಂಖ್ಯೆ : ಇಡಿ/52/ಎಸ್‌ಎಲ್‌ಬಿ/2003

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ : 19ನೇ ಮೇ 2003.

ಇವರಿಂದ :
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ,
ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ,
ಬೆಂಗಳೂರು – 560 001.

ಇವರಿಗೆ :
ನಿರ್ದೇಶಕರು (ಪ್ರೌಢಶಿಕ್ಷಣ)
ಸಾರ್ವಜನಿಕ ಶಿಕ್ಷಣ ಇಲಾಖೆ,
ನೃಪತುಂಗ ರಸ್ತೆ,
ಬೆಂಗಳೂರು – 560 001.

ವಿಷಯ : ಅನುದಾನಿತ ಪ್ರೌಢ ಶಾಲೆಗಳಲ್ಲಿನ ಮುಖ್ಯ ಶಿಕ್ಷಕರ ಹುದ್ದೆಯನ್ನು ಬಡ್ತಿ ಮೂಲಕ ಭರ್ತಿಸುವ ವಿಚಾರ
ಉಲ್ಲೇಖ : ತಮ್ಮ ಪತ್ರ ಸಂಖ್ಯೆ: ಸಿ8 (7) ಶಾಶಿಅ ಬಡ್ತಿ/10/2002–2003
ದಿನಾಂಕ : 31/3/2003

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿದೆ. ಅನುದಾನಿತ ಪ್ರೌಢ ಶಾಲೆಗಳಲ್ಲಿ ಮುಖ್ಯೋಪಾಧ್ಯಾಯರ ಹುದ್ದೆಗೆ ಬಡ್ತಿ ನೀಡುವ ಕುರಿತು ಸರ್ಕಾರದ ದಿನಾಂಕ : 31/01/2001ರ ಅಧಿಸೂಚನೆ ಸಂಖ್ಯೆ : ಇಡಿ/64/ವಿವಿಧ/2000ದ ಮೂಲಕ ತಿದ್ದುಪಡಿ ಮಾಡಿ ಅನುಬಂಧ–6ನ್ನು ಸೇರಿಸುವ ಮೂಲಕ the Karnataka Educational Institutions (Recruitment and terms and conditions of service of employees in private aided Primary and Secondary Educational Institutions) Rules, 1999 ಈ ನಿಯಮಗಳಲ್ಲಿ ಆಸ್ಪದವನ್ನು ಕಲ್ಪಿಸಲಾಗಿದೆ. ಸದರಿ ಅನುಬಂಧ–6ರ ಐಟಂ (ಇಇಇ) ಈ ಕೆಳಕಂಡಂತಿದೆ :–

iii) The eligible teacher must be a trained Secondary School Assistant and must have put in not less than five years of approved teaching service in the Secondary School"

ಮೇಲೆ ಉದ್ಧರಿಸಿದ ಉಪಬಂಧ ಸ್ಪಷ್ಟವಾಗಿದೆ. ಅದರಂತೆ ನಿಗದಿಪಡಿಸಿದ ಅಂದರೆ "trained Secondary School Assistant" ಆಗಿರುವ ಹಾಗೂ "not less than five years of approved

teaching service in the Secondary School" ಹೊಂದಿರುವ ಶಿಕ್ಷಕರನ್ನು ಜೇಷ್ಟತೆಯ ಆಧಾರದ ಮೇಲೆ ಬಡ್ತಿ ನೀಡಲು ಸದರಿ ಅನುಬಂಧ-6ರಲ್ಲಿ ಆಸ್ಪದವನ್ನು ಕಲ್ಪಿಸಲಾಗಿದೆ.

ಸಾಂಧರ್ಭಿಕವಾಗಿ ಹೇಳುವುದಾದರೆ, ಸದರಿ ಅನುಬಂಧ-6ರ ಪ್ರಕಾರ, ಅನುದಾನಿತ ಪ್ರೌಢಶಾಲೆಗಳಲ್ಲಿ ಮುಖ್ಯೋಪಾಧ್ಯಯರ ಹುದ್ದೆಗೆ ಬಡ್ತಿ ನೀಡುವ ಪ್ರಸ್ತಾವನೆಗಳನ್ನು ಅನುಮೋದಿಸುವ ಸಕ್ರಮ ಪ್ರಾಧಿಕಾರ "The Regional Secretary, Karnataka Secondary Education Examination Board and Ex-officio Joint Director of Public Instruction of the concerned Division" ಆಗಿರುತ್ತಾರೆ. ಆ ಸಕ್ಷಮ ಪ್ರಾಧಿಕಾರ ತನ್ನ ಅನುಮೋದನೆಯನ್ನು ನೇಮಕಾತಿ ಪ್ರಾಧಿಕಾರಕ್ಕೆ ತಿಳಿಸಿದ ನಂತರವೇ ನೇಮಕಾತಿ ಪ್ರಾಧಿಕಾರ ಬಡ್ತಿ ನೀಡಲು ಆಸ್ಪದವಾಗುತ್ತದೆ. ಆದರೆ ಈ ಪ್ರಕರಣದಲ್ಲಿ ಸದರಿ ಸಕ್ಷಮ ಪ್ರಾಧಿಕಾರಕ್ಕೆ ಬಡ್ತಿಯ ಪ್ರಸ್ತಾವನೆ ಮಂಡಿಸಿರುವ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ.

ಮೇಲ್ಕಂಡಂತೆ ವಿವರಿಸಿರುವ ಹಿನ್ನಲೆಯಲ್ಲಿ ನಿಯಮಾನುಸಾರ ಮುಂದಿನ ಅಗತ್ಯ ಕ್ರಮ ಕೈಗೊಳ್ಳಬೇಕೆಂದು ತಮಗೆ ತಿಳಿಸಲು ನಾನು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,

(ಸಿದ್ಧಲಿಂಗಯ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ
ಶಿಕ್ಷಣ ಇಲಾಖೆ